ಡಿ.ಡಬ್ಲ್ಯು: 3

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 04-07-2025

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಆರ್ ಎನ್ ವಕೀಲರಿಂದ,

ಆಸ್ತಿ ಸರ್ವೆ ನಂಬರ 680/2 ರ 1 ಎಕರೆ 32 ಗುಂಟೆ ಮೂಲತಃ ಸೋಮಯ್ಯ ಮತ್ತು ದುರ್ಗಪ್ಪ ಎಂಬವರಿಗೆ ಭೂನ್ಯಾಯ ಮಂಡಳಿಯಿಂದ ಮಂಜೂರಿಯಾಗಿರುತ್ತದೆ. ಸದ್ರಿ ಮೇಲೆ ಹೇಳಿದ ಆಸ್ತಿ ಸೋಮಯ್ಯ ಮತ್ತು ದುರ್ಗಪ್ಪರವರ ಸಾಮಾಯಿಕ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಸೋಮಯ್ಯ ಮತ್ತು ದುರ್ಗಪ್ಪ ಮತ್ತು ಅವರ ಕುಟುಂಬಗಳ ನಡುವೆ ಪಾಲುಪಟ್ಟಿ ಆದ ಬಗ್ಗೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಆಸ್ತಿ ಸನ್ 1976 ರಲ್ಲಿ ಭೂನ್ಯಾಯ ಮಂಡಳಿಯಿಂದ ಮಂಜೂರಿಯಾಗಿರುತ್ತದೆ. ಸದ್ರಿ ಆಸ್ತಿ ಮಂಜೂರಿ ಆದಾಗ ಸೋಮಯ್ಯ ಮತ್ತು ದುರ್ಗಪ್ಪ ರವರ ತಂದೆ ಜೀವಿತ ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಸೋಮಯ್ಯ ನನಗೆ ನನ್ನ ಹೆಂಡತಿಯ ಕಡೆಯಿಂದ ಸಂಬಂಧಿ ಆಗಬೇಕು. ಸೋಮಯ್ಯ ಮತ್ತು ದುರ್ಗಪ್ಪ ಇವರ ಕುಟುಂಬದ ಸದಸ್ಯರ ಪರಿಚಯ ನನಗೆ ಮೊದಲಿನಿಂದಲೂ ಇತ್ತು. ದಾನಪತ್ರ ಮಾಡುವುದರ ಕುರಿತು ಸದರಿ ವಿಚಾರವನ್ನು ನನಗೆ ನನ್ನ ಭಾವ ಮಂಜುನಾಥ ಭೈರಾ ನಾಯ್ಕರವರ ಮುಖಾಂತರ ಗೊತ್ತಾಗಿರುತ್ತದೆ. ದಾನಪತ್ರದ ಬಗ್ಗೆ ನನ್ನ ಸಮಕ್ಷಮ ಯಾವುದೇ ಮಾತುಕತೆ ಆಗಿರಲಿಲ್ಲ ಆದರೆ ಮೂರು ದಿನಗಳ ಪೂರ್ವದಲ್ಲಿ ನನಗೆ ಬರಲು ಹೇಳಿದ್ದರು. ದಾನಪತ್ರದಲ್ಲಿ ತೋರಿಸಿದ ಆಸ್ತಿಯ ಸಂಬಂಧ ಅವರ ಕುಟುಂಬದಲ್ಲಿ ಪಾಲುಪಟ್ಟಿ ಆದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದ್ರಿ ಆಸ್ತಿಯಲ್ಲಿ ತಲಾ 36 ಗುಂಟೆಯಂತೆ ಪ್ರತ್ಯೇಕ ಆಗಿರುವುದರ ಕುರಿತು ಯಾವುದೇ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸದ್ರಿ ಆಸ್ತಿಯನ್ನು ತಲಾ 36 ಗುಂಟೆಯಂತೆ ಯಾರಿಗೆ ಯಾವ ದಿಕ್ಕಿಗೆ ಕೊಟ್ಟಿದ್ದಾರೆಂದು ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ಸದ್ರಿ ದಾನಪತ್ರದಲ್ಲಿ ಹೇಳಿದಂತ ಆಸ್ತಿಯು ನಿಖರವಾದ ಯಾವ ದಿಕ್ಕಿಗೆ ನೀಡಲಾಗಿದೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ದಾನಪತ್ರವನ್ನು ವಿ ಎಮ್ ನಾಯ್ಕ ಎನ್ನುವ ವಕೀಲರು ದಿನಾಂಕ 18.09.2010 ರಂದು ಬರೆದಿರುತ್ತಾರೆ. ದಾನಪತ್ರವನ್ನು ಟೈಪ್ ಮಾಡಿ ಬರೆಯುವಾಗ ನಾನು ಸ್ಥಳದಲ್ಲಿರಲಿಲ್ಲ. ದಾನಪತ್ರವನ್ನು ತಯಾರಿಸಲು ಸೋಮಯ್ಯ ತಾನೇ ಮಾಹಿತಿ ಕೊಟ್ಟಿದ್ದೇನೆ ಎಂದು ನನ್ನ ಬಳಿ ಹೇಳಿರುತ್ತಾನೆ. ದಾನಪತ್ರವನ್ನು ಬರೆಯುವ ಮೂರು ದಿನಗಳ ಮೊದಲು ಸದ್ರಿ ವಿಚಾರವನ್ನು ನನಗೆ ತಿಳಿಸಿದ್ದರು.

ಭಟ್ಕಳ ನೋಂದಣಿ ಅಧಿಕಾರಿಗಳ ಕಚೇರಿಗೆ ಮಧ್ಯಾಹ್ನ 12.00ಗಂಟೆಗೆ ಬಂದಿದ್ದೆವು. ಮಧ್ಯಾಹ್ನ 1.30 ಗಂಟೆಯ ಸುಮಾರಿಗೆ ಎಲ್ಲ ಪ್ರಕ್ರಿಯೆ ಮುಗಿದಿತ್ತು. ಮೊದಲು ಕ್ರಯಪತ್ರ ನೋಂದ್ ಮಾಡಲಾಯಿತು. ನಂತರ ದಾನಪತ್ರ ನೋಂದ್ ಮಾಡಲಾಯಿತು. ದಾನಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಾನಪತ್ರದಲ್ಲಿ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದು ಬರೆದಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾನಪತ್ರದಲ್ಲಿ ವಾದಿಯರಿಗೆ ಆಸ್ತಿಯಲ್ಲಿ ಪಾಲು ಮಾಡಿಕೊಡಲಾಗಿದೆ ಎಂದು ಬರೆದಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾನಪತ್ರದಲ್ಲಿ ದಾವಾ ಆಸ್ತಿಗಳನ್ನು ಪಾಲುಪಟ್ಟಿ ಮಾಡಿ ಕೊಡಲಾಗಿದೆ ಎಂಬ ವಿಚಾರವನ್ನು ಬರೆದಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

2 ನೇ ಪ್ರತಿವಾದಿ ನನಗೆ ದೂರದ ಸಂಬಂಧಿಕರಾಗಬೇಕು. 2 ನೇ ಪ್ರತಿವಾದಿಯ ಮನೆಯಲ್ಲಿ ವಿಶೇಷವಾದ ಏನದರೂ ಕಾರ್ಯಕ್ರಮ ಇದ್ದರೆ ನಾನು ಹೋಗುತ್ತೇನೆ. ದಾನಪತ್ರ ಮಾಡುವಾಗ ಉಪನೋಂದಣಾ ಕಚೇರಿಯಲ್ಲಿ ನಾನು, 2 ನೇ ಪ್ರತಿವಾದಿ, ಸೋಮಯ್ಯ, ದುರ್ಗಪ್ಪ, ಹಿರಿಯಕ್ಕ, ಮಾಸ್ತಿ, ಮಂಜಮ್ಮ, ಮಾದೇವಿ ಹಾಜರಿದ್ದರು. ಅಂದರೆ ಅವರೆಲ್ಲರೂ ದುರ್ಗಪ್ಪನ ಮಕ್ಕಳು ಆಗಿರುತ್ತಾರೆ. 2 ನೇ ಪ್ರತಿವಾದಿಯ ತಂದೆ ಮತ್ತು ಸಹೋದರ ಅಲ್ಲಿ ಹಾಜರಿರಲಿಲ್ಲ. ದಾನಪತ್ರಕ್ಕೆ ಯಾರು ಯಾರು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ ಮತ್ತು ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ದಾನಪತ್ರದ ಪ್ರತಿಯೊಂದು ಪುಟಕ್ಕೆ ಸಹಿ ಮಾಡಲಾಗಿದೆ. ಮೊದಲಿಗೆ ಸೋಮಯ್ಯ, ನಂತರ ಹಿರಿಯಕ್ಕ, ಆನಂತರ ಮಾಸ್ತಿ, ಮಂಜಮ್ಮ ದಾನಪತ್ರಕ್ಕೆ ಸಹಿ ಮಾಡಿರುತ್ತಾರೆ. ಅವರನ್ನು ಹೊರತುಪಡಿಸಿ ಬೇರೆ ಯಾರೂ ಸಹಿ ಮಾಡಿರುವುದಿಲ್ಲ. ದಾನಪತ್ರದಲ್ಲಿ ಕುಟುಂಬಕ್ಕೆ ಆರ್ಥಿಕವಾಗಿ ತೊಂದರೆ ಇದ್ದ ಬಗ್ಗೆ ಮತ್ತು ಹಣದ ಅವಶ್ಯಕತೆ ಇದ್ದ ಬಗ್ಗೆ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ದಾನಪತ್ರದಲ್ಲಿರುವ ಕೆಲವೊಂದು ವಿಚಾರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಾನಪತ್ರಕ್ಕೆ ಎಲ್ಲರೂ ಕನ್ನಡದಲ್ಲಿ ಸಹಿ ಹಾಕಿರುತ್ತಾರೆ. ನನ್ನೊಂದಿಗೆ ದಾನಪತ್ರಕ್ಕೆ ನಾಗಪ್ಪ ತಂದೆ ನಾಗಪ್ಪ ನಾಯ್ಕ ಎನ್ನುವವರು ಸಹಿ ಹಾಕಿರುತ್ತಾರೆ. ದಾನಪತ್ರ ನೋಂದಾಯಿತ ಪ್ರಕ್ರಿಯೆಯು ಸುಮಾರು ಮುಕ್ಕಾಲು ಗಂಟೆಯವರೆಗೆ ಆಗಿರಬಹುದು. ದಾನಪತ್ರವನ್ನು ಯಾರು ಯಾರು ಓದಿದ್ದರು ಎಂಬುದು ನನಗೆ ಹೇಳಲು ಬರುವುದಿಲ್ಲ. ದಾನಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ತಯಾರಿಸುವಾಗ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಸೋಮಯ್ಯ ದಾನಪತ್ರ ಬರೆಯುವಾಗ ಅವರು ಚಿತ್ತ ಸ್ವಾಸ್ಥವಾಗಿದ್ದರು ಎಂದು ತಿಳಿದುಕೊಳ್ಳಲು ಯಾವುದೇ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು

ಅವರು ನಡೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಸೋಮಯ್ಯರವರು ಉಪನೋಂದಣಾ ಕಚೇರಿಯಲ್ಲಿ ನಾನು ಹೋಗುವುದಕ್ಕಿಂತ ಅರ್ಧ ಗಂಟೆ ಮೊದಲೇ ಹೋಗಿದ್ದರು. ನಾನು ಅರ್ಧ ಗಂಟೆ ತಡವಾಗಿ ಹೋಗಿದ್ದರಿಂದ ಸೋಮಯ್ಯರವರು ಹೇಗೆ ಬಂದರು ಎಂದು ನಾನು ನೋಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಅಲ್ಲಿ ಹೋದಾಗ ಸೋಮಯ್ಯರವರು ನಡೆದಾಡುತ್ತಿದ್ದರು ಎಂದು ನುಡಿಯುತ್ತಾರೆ.

ಹಿರಿಯಕ್ಕ ಮಾಡಿದ್ದಾಳೆಂದು ಹೇಳಿದ ಮೂಲ ಜಿಪಿಎ ಪ್ರತಿಯನ್ನು ನಾನು ನೋಡಿರುತ್ತೇನೆ. ಸದ್ರಿ ಜಿಪಿಎ ಪ್ರತಿ ದಾನಪತ್ರದ ದಸ್ತಾವೇಜಿನ ಫೈಲ್ ನಲ್ಲಿತ್ತು. ಜಿಪಿಎ ನೋಂದಾಯಿತ ಮಾಡಲಾಗಿದೆಯೇ ಅಥವಾ ನೋಟರಿಯವರ ಮುಂದೆ ಮಾಡಲಾಗಿದೆ ಎಂಬುದು ನನಗೆ ಗೊತ್ತಿಲ್ಲ.

ನಾನು ಜಮೀನು ಖರೀದಿಸುವುದು ಮತ್ತು ಮಾರಾಟ ಮಾಡುವುದು ಮಾಡುತ್ತಾ ಬಂದಿರುತ್ತೇನೆ ಎಂದರೆ ಸರಿ. ನಾನು ಮುರ್ಡೇಶ್ವರ ಮತ್ತು ಭಟ್ಕಳ ಕ್ಷೇತ್ರದಲ್ಲಿ ಹೆಸರಾಂತ ಜಮೀನು ಖರೀದಿಸಿ ಮಾರಾಟ ಮಾಡುವವನಾಗಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯ ಪೈಕಿ ಯಾವುದೇ ಆಸ್ತಿಯನ್ನು ನಾನು ಮಾರಾಟ ಮಾಡಿಕೊಟ್ಟಿರುವುದಿಲ್ಲ, ಆದರೆ ದಾವಾ ಆಸ್ತಿಯ ಪಕ್ಕ ನನ್ನ ಜಮೀನು ಇರುತ್ತದೆ. ನಾನು ಮತ್ತು 2 ನೇ ಪ್ರತಿವಾದಿ ಕೂಡಿಕೊಂಡು ಜಮೀನು ಖರೀದಿಸಿ ಮಾರಾಟ ಮಾಡುತ್ತೇವೆ ಎಂದರೆ ಸರಿಯಲ್ಲ. ದಾನಪತ್ರದಲ್ಲಿ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದು ಬರೆಯಲಾಗಿದೆ ಆದರೂ ಸಹ ಅದರಲ್ಲಿ ಬರೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನನಗೆ 2 ನೇ ಪ್ರತಿವಾದಿ ಒಂದು ತಿಂಗಳ ಹಿಂದೆ ಬರಲು ತಿಳಿಸಿದ್ದರು. 2 ನೇ ಪ್ರತಿವಾದಿಯ ಪರಿಚಯ ನನಗೆ ಅವರ ತಂದೆ ಮತ್ತು ಅಜ್ಜನ ಕಾಲದಿಂದ ಇರುತ್ತದೆ. ನಾನು ಮತ್ತು 2 ನೇ ಪ್ರತಿವಾದಿ ಬಹಳ ಪರಿಚಯಸ್ಥರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ದಾನಪತ್ರ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾನಪತ್ರ ಮಾಡಿದವರಿಗೆ ದಾವಾ ಆಸ್ತಿಯನ್ನು ದಾನ ಮಾಡಲು ಹಕ್ಕು ಇರುವುದಿಲ್ಲ, ಆದರೂ ಸಹ ನನ್ನನ್ನು ಸಾಕ್ಷಿಯನ್ನಾಗಿ ಮಾಡಿ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**